ಅಧಿಕ ಆತ್ಮವಿಶ್ವಾಸದಲ್ಲಿ ಯಾರಿಗೂ ಹೇಳದಂತೆ ಸುಮ್ಮನಿದ್ದ. ನೂರಾರು ಜನರನ್ನು ಹೊಡೆದೆಸೆಯುವ ಹಲವಾರು ಪಾತ್ರಗಳನ್ನು ಮಾಡಿ ಮಾಡಿ ಅವನಲ್ಲಿ ಹುಸಿ ಭರವಸೆ ತುಂಬಿ ತುಳುಕುತ್ತಿತ್ತು. ಇತ್ತೀಚೆಗೆ ಹೃದಯ ತಪಾಸಣೆ ಮಾಡಿಸಿಕೊಂಡಾಗ ತಜ್ಞರು ನಟನ ಹೃದಯವು ಸುಸ್ಥಿತಿಯಲ್ಲಿದೆ ಎಂದು ಶ್ಲಾಘಿಸಿದ್ದರು. ಕಾರಿನಲ್ಲಿದ್ದ ನಟನ ಸ್ನೇಹಿತರು ತಮ್ಮ ತಮ್ಮ ಮಾತಿನಲ್ಲಿ ಮುಳುಗಿದ್ದರು. ನೋವು ತಿನ್ನುತ್ತ ಕುಳಿತಿದ್ದ ನಟ ಯಾವಾಗಿನಂತೆಯೇ ಉಸಿರೆಳೆದುಕೊಂಡು ಬಿಟ್ಟ. ಅದು ಆತನ ಕೊನೆಯ ಉಸಿರಾಟವಾಗುತ್ತದೆ ಎಂದು ಕಾರಿನಲ್ಲಿದ್ದ ಅವನ ಸ್ನೇಹಿತರ ಅಥವಾ ನಟನ ಊಹೆಗೂ ಬಂದಿರಲಿಲ್ಲ. ನಟನ ಪ್ರಾಣವೆಂಬುದು ಯಾರಿಗೂ ಕಾಣದಂತೆ, ಕೇಳದಂತೆ, ವಾಸನೆ ಅಥವಾ ಸ್ಪರ್ಶಕ್ಕೆ ಸಿಗದಂತೆ ಮಾಯವಾಗಿತ್ತು. ನಟನ ತಲೆ ಭುಜದ ಮೇಲೊರಗಿತು.

ಕಾರಿನಿಂದ ಭಯದ, ಆಶ್ಚರ್ಯದ, ದುಃಖದ ಹಲವು ಚೀತ್ಕಾರಗಳು ವಾಹನ ದಟ್ಟಣೆ ಸೀಳಿಕೊಂಡು ಇಡೀ ಪ್ರದೇಶವನ್ನು ದಾಟಿ ನಗರದ ಮೂಲೆ ಮೂಲೆಗಳಲ್ಲಿ ಮಾರ್ದನಿಸಿದವು. ಆಗತಾನೇ ಇಪ್ಪತ್ತು ವರ್ಷ ಆಯಸ್ಸು ವರ್ಗಾಯಿಸಿದ್ದೇನೆಂದು ನಟನನ್ನು ಆಶೀರ್ವದಿಸಿದ್ದ ಪ್ರವಾದಿಯ ಕೇಂದ್ರದ ಕಡೆ ಇಡೀ ನಗರಕ್ಕೆ ನಗರವೇ ನುಗ್ಗಿತು. ಸಾವಿರಾರು ಜನ ಸೇರಿದ್ದ ಗುಂಪಿನಲ್ಲಿ ತರಾವರಿ ವದಂತಿಗಳು ಹಬ್ಬಿದವು. ಜನರು ಹುಚ್ಚರಂತೆ ಕಿರುಚತೊಡಗಿದರು. ಅವರು ಉನ್ಮಾದಗೊಂಡಿದ್ದರು. ಕಣ್ಣಿಗೆ ಕಂಡದ್ದನ್ನು ಪುಡಿ ಮಾಡುತ್ತ ಹೊರಟರು. ನಾಯಕನ ಪಾತ್ರದಲ್ಲಿ ನಟ ಹೇಗೆ ಎದುರಿದ್ದವರ ಸದೆಬಡಿಯುತ್ತಿದ್ದನೋ ಅದೇ ರೀತಿ ಹಿಡಿದು ಬಟ್ಟೆಯಂತೆ ಶೆಣೆದು ರಕ್ತ ಹಿಂಡಿ ಎಸೆದರು. ಕೇವಲ ಕೆಲವೇ ನಿಮಿಷಗಳಲ್ಲಿ ಆ ಕೇಂದ್ರವಿದ್ದಲ್ಲಿ ಕಟ್ಟಡಗಳ ಅವಶೇಷದ ಹಲವು ರಾಶಿಗಳಿದ್ದವು. ಪ್ರವಾದಿ ಮತ್ತು ಆತನ ಸಹಚರರೆಲ್ಲರ ಆಯಸ್ಸನ್ನು ಜನ ಒಮ್ಮೆಲೇ ಮುಗಿಸಿಬಿಟ್ಟಿದ್ದರು. ಪ್ರವಾದಿ ಕೇಂದ್ರಕ್ಕೆ ಕೇಂದ್ರವೇ ಚಕಣ ಚೂರಾಗಿತ್ತು.



ಇದಾದ ಒಂದು ವಾರದ ಬಳಿಕ ದೂರದರ್ಶನದಲ್ಲಿ ಬ್ರೇಕಿಂಗ್ ನ್ಯೂಸ್ ಬರುತ್ತಿತ್ತು. ಶವದ ಮೆರವಣಿಗೆ ತೋರಿಸಲಾಗುತ್ತಿತ್ತು. ಮೆರವಣಿಗೆಯಲ್ಲಿ ಕೆದರಿದ ತಲೆಯ, ಹರಿದ ಬಟ್ಟೆಯ ಹುಚ್ಚನೊಬ್ಬ ಕುಣಿಯುತ್ತಿದ್ದ. ಅವನು ಪ್ರವಾದಿಯಿಂದ ತಲೆಗೆ ಬಂಗಾರದ ದಂಡದಿಂದ ಏಟು ತಿಂದ ದೂರದರ್ಶನದ ಯಾವುದೋ ವಾಹಿನಿಯ ಸಿಬ್ಬಂದಿಯಾಗಿದ್ದ. ದಂಡದ ಏಟು ಎಲ್ಲಿಗೆ ಎಷ್ಟು ರಭಸವಾಗಿ ಬಿದ್ದಿತ್ತೋ ಏನೋ? ಅವನು ರಿಪೇರಿಯಾಗದ ಹುಚ್ಚನಾಗಿದ್ದ.

ಮೆರವಣಿಗೆಯಲ್ಲಿ ಮತ್ತೊಬ್ಬ ಬಡ ಮುದುಕನನ್ನು ತೋರಿಸಲಾಗುತ್ತಿತ್ತು. ಅವನು 'ನನ್ನ ಮಗ ಅನ್ಯಾಯವಾಗಿ ಜೈಲುಪಾಲಾಗಿದ್ದ. ಸರ್ಕಾರವೇ ಅವನನ್ನು ನಿರ್ದೋಷಿ ಎಂದು ಖುಲಾಸೆ ಮಾಡಿತು. ಮನೆಗೆ ವಾಪಸ್ ಬಂದಿದ್ದಾನೆ. ಕೆಲ ದಿನಗಳ ಕೆಳಗೆ ನಾನು ಸಾಯುವ ಹಾಗಾಗಿದ್ದೆ. ಪ್ರವಾದಿ ನನಗೆ ನಾಲ್ಕೇ ನಾಲ್ಕು ದಿನದ ಆಯಸ್ಸನ್ನು ಕಾಲಿಗೆ ಬಿದ್ದು ಕೇಳಿಕೊಂಡರೂ ದಯಪಾಲಿಸಲಿಲ್ಲ. ಆದರೆ ಆ ಸರ್ವಶಕ್ತನಾದ ದೇವರು ಅರವತ್ತು ವರ್ಷಕ್ಕೂ ಹೆಚ್ಚು ಆಯಸ್ಸನ್ನು ತಾಯಿಯ ಪ್ರೀತಿಯಿಂದ ನನಗೆ ನೀಡಿದ್ದಾನೆ. ನೋಡಿರಿ ನಾನಿನ್ನೂ ಆರೋಗ್ಯವಾಗಿದ್ದೇನೆ. ಯಾರಿಗೆ ಎಷ್ಟು ಆಯಸ್ಸು ಕೊಡಬೇಕೆಂದು ಆ ತಂದೆಗೆ ಗೊತ್ತು' ಎಂದು ಗದ್ಗದಿತನಾಗಿ ನುಡಿಯುತ್ತಿದ್ದ. ಅವನು ಆಗಸದೆಡೆ ಮುಖ ಮಾಡಿ ಪಾಪಗಳನ್ನು ತೊಳೆಯಬಲ್ಲ ಶಕ್ತಿಯಿರುವ ಕಣ್ಣೀರನ್ನು ಸುರಿಸುತ್ತಿದ್ದ.

ಪ್ರವಾದಿಯಿಂದ ಮೂವತ್ತು ವರ್ಷ ಒಂಬತ್ತು ತಿಂಗಳು ಮೂರು ದಿನದ ಆಯಸ್ಸನ್ನು ವರ್ಗಾಯಿಸಿಕೊಂಡಿದ್ದ ಕ್ಯಾನ್ಸರ್ ಪೀಡಿತ ಭಾರೀ ಶ್ರೀಮಂತನ ಶವಯಾತ್ರೆ ಅದಾಗಿತ್ತು.

●